ರೈತರಿಗೆ ಬಹಳ ಸಮಸ್ಯಾತ್ಮಕ ವಾತಾವರಣವನ್ನು ಸೃಷ್ಟಿ ಮಾಡಿವೆ. 20 ದೊಡ್ಡ ಕೈಗಾರಿಕೆಗಳಿಗೆ 40 ರಿಂದ 60 ಪರ್ಸೆಂಟ್ ವಿದ್ಯುತ್ ಖೋತ ಹೆಚ್ಚು ಮಾಡಿರುವುದನ್ನು ಅವತ್ತಿನಿಂದಲೇ ಜಾರಿಗೆ ತಂದಿದ್ದೇವೆ. ಆದರಿಂದಾಗಿ ಕೊಂಚ ಮಟ್ಟಿಗಾದರೂ ಪರಿಸ್ಥಿತಿ ಸುಧಾರಣೆಯಾಗುತ್ತದೆಂಬ ಆಶಾಭಾವನೆ ನಮ್ಮಲ್ಲಿತ್ತು. ಆದರೆ ಮಾನ್ಯ ಸದಸ್ಯರು ಕೊಟ್ಟಿರುವ ಮಾಹಿತಿ ಆಧಾರದ ಮೇಲೆ ಮತ್ತೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸಾಯಂಕಾಲದೊಳಗೆ ಸದನಕ್ಕೆ ನನ್ನ ಅಭಿಪ್ರಾಯಗಳನ್ನು ತಿಳಿಸುತ್ತೇನೆ.

ನಿಯಮ 334ರ ಮೇರೆಗೆ

1. ಬೆಂಗಳೂರು ನಗರದ ರಸ್ತೆಗಳ ದುರಸ್ತಿ

ಶ್ರೀ ಎ.ಕೆ. ಆನಂತಕೃಷ್ಣ (ಶಿವಾಜಿನಗರ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಗ ಒಂದೆರಡು ರಸ್ತೆಗಳನ್ನು ಬಿಟ್ಟರೆ ಉಳಿದ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ. ಸಾಮಾನ್ಯವಾಗಿ ಮಳೆಗಾಲ ಕಳೆದ ನಂತರ ನವೆಂಬರ್ ಮಾಹೆಯಲ್ಲಿ ಕೆಲಸ ಪ್ರಾರಂಭವಾಗಿ ಫೆಬ್ರವರಿಯೊಳಗಾಗಿ ರಸ್ತೆ ರಿಪೇರಿ ಕೆಲಸ ಮುಗಿಯುತ್ತಿತ್ತು. ಈ ಬಾರಿ ಯಾರೂ ಈ ಕಡೆ ಗಮನ ಹರಿಸಿರುವುದಿಲ್ಲ. ಕೆಲವು ರಸ್ತೆಗಳಲ್ಲಿ ಹಳ್ಳಗಳಿದ್ದು ರಾತ್ರಿ ಕಾಲದಲ್ಲಿ ವಾಹನ ಸಂಚಾರಕ್ಕೆ ಬಹಳ ಕಷ್ಟವಾಗುತ್ತಿದೆ. ಸಾಲದಕ್ಕೆ ಕೆಲವು ಕಡೆ ರಸ್ತೆ ದೀಪಗಳೂ ಇಲ್ಲದೇ ಇರುವ ಕಾರಣ ಮತ್ತಷ್ಟು ತೊಂದರೆಯಾಗುತ್ತಿದೆ. ಈ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮಾಹಿತಿ ಬರುವುದು ಸ್ವಲ್ಪ ಲೇಟಾಗಿದೆ ದಯವಿಟ್ಟು ಟೈಮ್ ಕೊಡಬೇಕು.

2. ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರ ಪೇಟೆಗಳಲ್ಲಿ ಮನೆ ನಿವೇಶನಗಳ ಹಂಚಿಕೆ

ಶ್ರೀಮತಿ ಸುಮಾ ವಸಂತ್(ವಿರಾಜ ಪೇಟೆ):– ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಮಡಿಕೇರಿ, ವೀರಾಜಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಮನೆ ನಿವೇಶನಗಳನ್ನು ಹಂಚುವ ಬಗ್ಗೆ ಆಯಾ ಸ್ಥಳಗಳಲ್ಲಿ ನಿವೇಶನ ಮಂಜೂರು ಮಾಡದಂತೆ ಹಾಗೂ ಮಂಜೂರಾತಿಗೆ ಸರ್ಕಾರಕ್ಕೆ ಕಳುಹಿಸಬೇಕೆಂದೂ ಸರ್ಕಾರ ಆಧಿಸೂಚನೆ ನೀಡಿರುವುದಾಗಿ ತಿಳಿದುಬಂದಿದೆ. ನಿವೇಶನ ಮಂಜೂರಾತಿಗೆ ಸಂಬಂಧಪಟ್ಟ ಎಲ್ಲ ಅರ್ಜಿಗಳು ಜಿಲ್ಲಾಧಿಕಾರಿಗಳಲ್ಲಿ ಉಳಿದಿದೆ. ನಿವೇಶನಕ್ಕಾಗಿ ಕೊಡುವ ಮೂರುಮುಕ್ಕಾಲು ಸೆಂಟು ಜಾಗವನ್ನು ಸರ್ಕಾರವೇ ಮಂಜೂರು ಮಾಡುವುದನ್ನು ಬಿಟ್ಟುಕೊಟ್ಟಲ್ಲಿ ಬಡಜನರಿಗೆ ಅನುಕೂಲವಾಗುವಂಥ ತೀರ್ಮಾನ ತೆಗೆದುಕೊಂಡ ಬಗ್ಗೆ ಸದನಕ್ಕೆ ಹೇಳಿಕೆ ಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆ ನೀಡುತ್ತಿದ್ದೇನೆ. ರಾಜ್ಯ ಸರ್ಕಾರವು ವೈಯಕ್ತಿಕವಾಗಿ ಹಾಗೂ ಖಾಸಗಿ ಸಂಸ್ಥೆಗಳಿಗಾಗಿ ಸರ್ಕಾರ ಜಮೀನನ್ನು ಮಂಜೂರು ಮಾಡುವ ಮೊದಲು ಸರ್ಕಾರದ ಮಂಜೂರಾತಿಯನ್ನು ಪಡೆಯಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಸದರಿ ಪೂರ್ವಭಾವಿ ಷರತ್ತನ್ನು 1989ರಿಂದ ವಿಧಿಸಲಾಗಿದೆ. ಏಕೆಂದರೆ, ಮಂಜೂರಾತಿ ಮಾಡುವ ಅಧಿಕಾರಿಗಳು ಯಥೇಚ್ಚವಾಗಿ ಜಮೀನನ್ನು ಮಂಜೂರು ಮಾಡುತ್ತಿದ್ದರು. ಸರ್ಕಾರಿ ಜಮೀನಿನಲ್ಲಿ ನಿವೇಶನಗಳನ್ನು ವಿತರಣೆ ಮಾಡುವ ವಿಚಾರದಲ್ಲಿಯೂ, ಜಿಲ್ಲಾಧಿಕಾರಿಗಳು